(e) Sandal sapling have come up in the plantations. The exact number of Sandal Wood trees established has not been enumerated.

(f) Cases of felling of Sandal wood trees have been come across, Six cases of Sandal wood smuggling were detected, during 1977-78 in which the Sandal wood seized is valued at Rs. 8,800. These cases are under police investigation.

Results of Final B.Sc. examination of Mysore University.

ಶ್ರೀ ಬಿ. ವಿ. ಕಕ್ಕಿಲಾಯ—ಮೈಸೂರು ವಿಶ್ವವಿದ್ಯಾನಿಲಯದ ಅಂತಿಮ ಬಿ.ಎಸ್ಸಿ,, ಪರೀಕ್ಷೆ ಫಲಿತಾಂಶ ಪ್ರಕಟವಾಗಲು ತಡವಾಗಿರುವುದರ ಬಗ್ಗೆ ಮಾನ್ಯ ವಿದ್ಯಾ ಸಚಿರು ನಿನ್ನೆ ಒಂದು ಹೇಳಿಕೆಯನ್ನು ಕೊಡುವುದಾಗಿ ಹೇಳಿದ್ದರು. ನಿನ್ನೆ ಆವರಿಗೆ ಹೇಳಿಕೆ ಕೊಡಲಿಕ್ಕಾಗಲಿಲ್ಲ. ಆದುದರಿಂದ, ಇಂದು ಆವರು ಹೇಳಿಕೆ ಕೊಡುವರೆ ?

Attendance of Officers in the Officers Gallary during Question Hour.

ಶ್ರೀ ಎಸ್. ಆರ್. ಬೊಮ್ಮಾಯಿ—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿರುವಾಗ ವಿಧಾನ ಸಭೆಯ ಅಧಿಕಾರಿಗಳ ವೇದಿಕೆ ತುಂಬಿರುತ್ತದೆ. ಆದರೆ, ಇತರ ಮಂತ್ರಿಗಳು ಪ್ರಶ್ನೆಗಳಿಗೆ ಉತ್ತರ ಕೊಡುವಾಗ, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳೇ ಇರುವುದಿಲ್ಲ. ತಾವು ಈಗಲೂ ನೋಡಬಹುದು ; ಅಧಿಕಾರಿಗಳ ವೇದಿಕೆಯು ಮೊದಲನೆಯ ಸಾಲು ಖಾಲಿ ಇದೆ. ಹೀಗೆ ಏಕಕ್ಕೆ ಆಗುತ್ತದೆ ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ—ಮಾನ್ಯ ಸಚಿವರು ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಅಧಿಕಾರಿಗಳು ಇದ್ದರೆ.

ಶ್ರೀ ಎಸ್. ಆರ್. ಬೊಮ್ಮಾಯಿ—ಇಂಥಾ ವಿವರಗಳನ್ನು ಮಾನ್ಯ ಭಾಸ್ಕರ ಶೆಟ್ಟಿಯವರು ಸಮರ್ಥನೆ ಮಾಡುವುದು ಬೇಡ. ಮಾನ್ಯ ಸಚಿವರುಗಳು ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದ ಕಾಲದಲ್ಲಿ ಅಧಿಕಾರಿಗಳ ವೇದಿಕೆ ಖಾಲಿ ಇದ್ದುದನ್ನು ಗಮನಿಸಿ, ನಾನು ಈ ಮಾತನ್ನು ಹೇಳುತ್ತಿದ್ದೇನೆ,

ಶ್ರೀ ಬಿ. ಭಾಸ್ಕರ ಶೆಟ್ಟಿ—ಪ್ರಶ್ನೆ ಮುಗಿದ ಮೇಲೆ ಅಧಿಕಾರಿಗಳು ಹೋಗಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಹುಬ್ಬಳ್ಳಿ)—ಬೇರೆ ಅಧಿಕಾರಿಗಳು ಇರುವುದು ಅವಶ್ಯಕತೆ ಇಲ್ಲ. ಆದರೆ, ಪ್ರಶ್ನೆಗೆ ಸಂಬಂಧಪಟ್ಟ ಅಧಿಕಾರಿಗಳು ವೇದಿಕೆಯಲ್ಲಿರುವುದು ಬಹಳ ಒಳ್ಳೆಯದು. ಏಕೆಂದರೆ, ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಸಚಿವರಲ್ಲಿ ಕೇಳಿದಾಗ, ಅದನ್ನು ಗುರುತು ಹಾಕಿಕೊಂಡು ಕಾರ್ಯಗತ ಮಾಡುವವರು ಅಧಿಕಾರಿಗಳು. ಮಾನ್ಯ ಸಚಿವರು ಉತ್ತರವನ್ನು ಮಾತ್ರ ಕೊಡುತ್ತಾರೆ, ಆದರೆ ವಾಸ್ತವವಾಗಿ ಅದನ್ನು ಕಾರ್ಯಗತ ಮಾಡುವವರು ಅಧಿಕಾರಿಗಳು. ಆದುದರಿಂದ, ಮಾನ್ಯ ಸಚಿವರುಗಳು ಸಭೆಯಲ್ಲಿ ಪ್ರಶ್ನೆಗಳಿಗೆ ಉತ್ತರ ಕೊಡುವಾಗ, ಸಂಬಂಧಪಟ್ಟ ಅಧಿಕಾರಿಗಳು ವೇದಿಕೆಯಲ್ಲಿರುವುದು ಒಂದು ಸತ್ಸಂಪ್ರದಾಯವಷ್ಟೇ ಅಲ್ಲ, ಈ ಸಭೆಗೆ ಒಂದು ಗೌರವ.

SRI B. SUBBAYYA SHETTY (Minister for Education)—I too answered some questions pertaining to my department and the Minister for Housing. All the officers connected with those questions were there and they were available to me for consultation.

MR. SPEAKER—I request the Hon. Minister for Education to convey the feelings of the members in this respect.

SRI B. SUBBAYYA SHETTY—I shall convey, Sir